ಅ) ಶಿವಮೊಗ್ಗ ನರಗದಲ್ಲಿರುವ ಕೇಂದ್ರ ಕಾರಾಗೃಹ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸುವ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೆ? ಈ ಯೋಜನೆಯ ಉದ್ದೇಶಿತ ಮೊತ್ತವೆಷ್ಟು? ಯಾವಾಗ ಪ್ರಾರಂಭಿಸಲಾಗುವುದು;

ಆ) ಶಿವಮೊಗ್ಗ ಕಾರಾಗೃಹದಲ್ಲಿ ಹೊಡೆದಾಟ, ಕೊಲೆ ಪ್ರಕರಣಗಳು ನಡೆದಿರುವುದು ಸರ್ಕಾರಕ್ಕೆ ಮಾಹಿತಿ ಬಂದಿದೆಯೇ; ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳ ನಿರ್ಲಕ್ಷತನ ಹಾಗೂ ಕರ್ತವ್ಯ ಲೋಪವಾಗಿರುವ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮ ಜರುಗಿಸಲಾಗಿದೆ; ಕಾರಾಗೃಹದಲ್ಲಿ ವಿಚಾರಣಾಧೀನ ಖೈದಿಗೆ ಅಥವಾ ಶಿಕ್ಷೆಗೆ ಒಳಪಟ್ಟ ಖೈದಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ, ಪರಿಹಾರ ನೀಡಲಾಗುವುದೇ?

ಶ್ರೀ ರಾಜ ಅಮರೇಶ್ವರ್ ನಾಯಕ (ಬಂದೀಖಾನೆ ಸಚಿವರು) :

ಅ) ಇದೆ. ಈ ಯೋಜನೆಗೆ ರೂ. 10.00 ಲಕ್ಷಗಳನ್ನು ನಿಗಧಿಗೊಳಿಸಿದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು ಆದಷ್ಟು ಶೀಘ್ರ ಪ್ರಾರಂಭಿಸಲಾಗುವುದು.

ಆ) ಬಂದಿದೆ. ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿ/ಸಿಬ್ಬಂದಿಗಳು ಶಾಮೀಲಾಗಿರುವುದಿಲ್ಲ. ಕಾರಾಗೃಹಗಳಲ್ಲಿನ ಬಂದಿಗಳಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಕೊರಟಗೆರೆ ತಾಲ್ಲೂಕಿನಲ್ಲಿ ಆರಕ್ಷಕ ಠಾಣೆ ಮಂಜೂರಾತಿ

2569(3351) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಕೋಳಾಲದಲ್ಲಿ ಹೊಸದಾಗಿ ಆರಕ್ಷಕ ಉಪ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆಗೆ ಇದೂವರೆವಿಗೂ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ಆರಕ್ಷಕ ಉಪ ಠಾಣೆ ಮಂಜೂರಾತಿಗೆ ವಿಳಂಬ ಮಾಡಿರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು;

ಇ) ಇದೇ ಸಾಲಿನಲ್ಲಿ ಆರಕ್ಷಕ ಉಪ ಠಾಣೆ ಪ್ರಾರಂಭ ಮಾಡಿ ಈ ಭಾಗದ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಕೊರಟಗೆರೆ ತಾಲ್ಲೂಕು ಕೋಳಾಲದಲ್ಲಿ ಒಂದು ಆರಕ್ಷಕ ಪೊಲೀಸ್ ಠಾಣೆಯ ಸೃಜನೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಪರಿಶೀಲಿಸಲಾಗುವುದು.

ಕಾರ್ಕಳ ನಗರಕ್ಕೆ ನೀರು ಸರಬರಾಜು

2570(3209) ಶ್ರೀ ಗೋಪಾಲ ಬಂಡಾರಿ (ಕಾರ್ಕಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರ್ಕಳ ನಗರದಲ್ಲಿ ನೀರು ಸರಬರಾಜು ಯೋಜನೆಯಡಿ ಟ್ಯಾಂಕನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಟ್ಯಾಂಕಿಗೆ ನೀರು ಒದಗಿಸಲು ಸಂಪರ್ಕ ಲೈನಿನ ಅಗತ್ಯವಿದ್ದು, ಇದಕ್ಕಾಗಿ ನಗರ ನೀರು ಸರಬರಾಜು ಮಂಡಲಿಯಿಂದ ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಅದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬಂದಿದೆ

ಆ) ನಿಜ

ಇ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅಂತರ್ಜಲ ವೃದ್ಧಿಗೆ ಪಶ್ಚಿಮ ವಾಹಿನಿ ಯೋಜನೆ

2571(3210) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಯಾದ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಅಂತರ್ಜಲ ವೃದ್ಧಿಗೆ ಮತ್ತು ನೀರಾವರಿಗಾಗಿ ಪಶ್ಚಿಮ ವಾಹಿನಿ ಯೋಜನೆ ರೂಪಿಸಿದ್ದು ಅದರ ಬಗ್ಗೆ ಯಾವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ;

ಆ) ಕರಾವಳಿಯ ಮೇಲ್ಕಂಡ ಮೂರು ಜಿಲ್ಲೆಯ ನೀರಾವರಿ ವ್ಯವಸ್ಥೆಯನ್ನು ಬಲಪಡಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಮತ್ತು ಉಪನದಿಗಳ ಅಡ್ಡಲಾಗಿ 1469 ಹೊಸ ಕಿಂಡಿ ಅಣೆಕಟ್ಟುಗಳನ್ನು 39.041 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಪಶ್ಚಿಮವಾಹಿನಿ ಯೋಜನೆಯನ್ನು ರೂ: 295.00 ಕೋಟಿ ಮೊತ್ತಕ್ಕೆ ತಯಾರಿಸಿ ಕೇಂದ್ರ ಜಲ ಆಯೋಗ, ಭಾರತ ಸರ್ಕಾರ ಇಲ್ಲಿಗೆ ಸಲ್ಲಿಸಲಾಗಿದ್ದು, ಯೋಜನೆಗೆ ಅನುಮೋದನೆ ನಿರೀಕ್ಷಿಸಲಾಗುತ್ತಿದೆ.

ಆ) ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ಕರಾವಳಿ ಜಿಲ್ಲೆಗಳ ನೀರಾವರಿ ವ್ಯವಸ್ಥೆಯನ್ನು ನಬಾರ್ಡ್ ಸಹಾಯದೊಂದಿಗೆ ಹೊಸ ಕಿಂಡಿ ಅಣೆಕಟ್ಟುಗಳು : ಉಪ್ಪು ನೀರು ತಡೆ ಅಣೆಕಟ್ಟುಗಳ ನಿರ್ಮಾಣ, ಕಿಂಡಿ ಅಣೆಕಟ್ಟುಗಳ ಅಭಿವೃದ್ಧಿ ಕೆರೆಗಳ ಅಭಿವೃದ್ಧಿ, ತೋಡುಗಳ ಅಭಿವೃದ್ಧಿ, ಹೊಸ ಏತ ನೀರಾವರಿ ಯೋಜನೆಗಳು 11ನೇ ಹಣಕಾಸು ಆಯೋಗದ ನಿಧಿಯಡಿಯಲ್ಲಿ ಏತ ನೀರಾವರಿ ಪುನರುಜ್ಜೀವನ ಕಾಮಗಾರಿಗಳು ಹಾಗೂ ರೈತ ಕಾಯಕ ಕೆರೆ ಯೋಜನೆಯಡಿ ಕರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದರ ಮೂಲಕ ಬಲಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಸಾರಾಯಿ ತಯಾರಿಕೆಯಲ್ಲಿ ಕಲಬೆರಕೆ

2572(3414) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರಾಯಿ ತಯಾರಿಕೆ ಘಟಕಗಳಲ್ಲಿ ಕಾನೂನು ವಿರುದ್ಧವಾಗಿ ಮತ್ತು ಬರಿಸುವ ಕ್ಲೋರಲ್ ಹೈಡ್ರೇಟ್ ಅನ್ನು ಕಲಬೆರಕೆ ಮಾಡುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;